Sri H. SIDDAVEERAPPA:—My submission is, I will submit my point today and if the Minister can reply, his may do so today or he can reply tomorrow.

Mr. SPEAKER:—The difficulty is, I have just now received the notice. I have to go through it and I am bound to send a copy of it to the Government and they will have to reply. So, the whole thing will be taken up tomorrow.

CAUVERY WATER DISPUTES

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ):—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಕ್ಕೆ ಅತಿಮುಖ್ಯವಾದಂಥ ವಿಚಾರದ ಬಗ್ಗೆ ಚರ್ಚೆ ಮಾಡಲು ಮುಖ್ಯಮಂತ್ರಿಗಳು ದೆಹಲಿಗೆ ಹೋಗಿ ಬಂದಿದ್ದಾರೆ. ಅವರು ಕಾವೇರಿ ನದಿ ನೀರಿನ ಹಂಚಿಕೆ ಬಗ್ಗೆ ಚರ್ಚೆ ಮಾಡಲು ದೆಹಲಿಗೆ ಹೋಗಿದ್ದರು, ಆ ಬಗ್ಗೆ ಕೆಲವು ವರದಿಗಳು ಪತ್ರಿಕೆಗಳಲ್ಲಿ ಬಂದಿದೆ. ಆದರೇ ಮುಖ್ಯಮಂತ್ರಿಗಳು ಆ ಬಗ್ಗೆ ಈ ಶಾಸನಸಭೆಯಲ್ಲಿ ಯಾವ ಹೇಳಿಕೆಯನ್ನು ಸಹ ಕೊಟ್ಟಿಲ್ಲ. ಪತ್ರಿಕೆಯ ವರದಿಯ ಪ್ರಕಾರ ನಮಗೆ ಒಂದು ರೀತಿಯ ಕಳವಳ ಉಂಟಾಗಿದೆ. ಕಾವೇರಿ ಬೇಸಿನ್‌ನಲ್ಲಿ ಯೋಜನೆಗಳನ್ನು ನಮ್ಮ ಸರ್ಕಾರದವರು ಕೈಕೊಳ್ಳುವ ಬಗ್ಗೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ಅಲ್ಲಿ ಮಾತುಕತೆಗಳು ನಡೆದಿರುವಂತೆ ಕಾಣುತ್ತಿದೆ. ಮತ್ತು ಈ ಬಗ್ಗೆ ನಮಗೆ ಒಂದು ರೀತಿಯ ಸಂಶಯ ಬಂದಿದೆ. ಈ ವಿಚಾರದಲ್ಲಿ ದೆಹಲಿಯಿಂದ ಬಂದಿರತಕ್ಕಂಥ ವರದಿ ಮದ್ರಾಸ್ ನಿಂದ ಬಂದಿರತಕ್ಕಂಥ ವರದಿಗಳ ಬಗ್ಗೆ ನೋಡುವುದಾದರೆ, ಒಂದಕ್ಕೊಂದು ಉತ್ಪ್ರೇಕ್ಷೆಯಿಂದ ಕೂಡಿವೆ. ಈ ನದಿ ನೀರಿನ ವಿಚಾರದಲ್ಲಿ ಮದ್ರಾಸ್‌ನವರು ನಾಳೆ ಟ್ರಿಬ್ಯುನಲ್‌ಗೆ ಹೋದರೆ ನಮಗೆ ತೊಂದರೆ ಬರಬಹುದು. ಕೇಂದ್ರದ ನೀರಾವರಿ ಮಂತ್ರಿಗಳಾದ ಕೆ. ಎಲ್. ರಾವ್ ಅವರು ಈ ಬಗ್ಗೆ ಒಂದು ನಿರ್ದಿಷ್ಟ ನಿಲುವು ತಾಳದೇ ಇರುವುದರಿಂದ ಅವರು ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಬಹುದೆಂಬ ಅನುಮಾನ ನಮಗೆ ಬಂದಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಚರ್ಚೆಯಾದಂಥ ಎಲ್ಲ ವಿಷಯಗಳನ್ನು ತಿಳಿಸುವುದಕ್ಕೆ ಸಾಧ್ಯವಾಗದಿದ್ದರೆ ಕೊನೆಯಪಕ್ಷ ನಮ್ಮ ರಾಜ್ಯದಲ್ಲಿ ಕಾವೇರಿ ಜಲಾಶಯದಲ್ಲಿ ನಿರ್ಮಾಣವಾಗತಕ್ಕಂಥ ಯೋಜನೆಗಳಿಗೆ ತೊಂದರೆಯಾಗದಂಥ ರೀತಿಯಲ್ಲಿ ಮಾತುಕತೆಯಾಗಿದೆಯೇ ಎಂಬುದನ್ನು ತಿಳಿಸಬೇಕು. ನಮ್ಮ ಯೋಜನೆಗಳಿಗೆ ತೊಂದರೆಯಾತ್ತದೆಯೇ ಇಲ್ಲವೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಮಾಧಾನಕ್ಕೆ ಈ ಸಭೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Sri N. A. CHANNE GOWDA:—I may be permitted to say a few words

Mr. SPEAKER:—There should be some procedure in all these matters. I am just considering whether I should permit discussion or not.

ಶ್ರೀ ಎನ್ ಎ ಚನ್ನೇಗೌಡ; ನಾನು ಎರಡು ಮಾತು ಹೇಳಲು ಅವಕಾಶ ಕೊಡಿ. ನಾನು ಇದರ ಬಗ್ಗೆ ಒಂದು ನೋಟೀಸು ಕೂಡ ತಮ್ಮ ಕಡೆಗೆ ಕಳುಹಿಸಿದ್ದೇನೆ.

Mr. SPEAKER:—I have received certain notices on this question. If I remember correctly, Hon. Members Sriyuths N. A. Channe gowda, B. Ganganna, M. Nagappa, H. N. Nanje Gowda and several other members have given them notice of motion on this subject I have not yet decided the question of admitting when I take a decision' I shall communicate it at the earliest: In the meanwhile, if the Hon. Chief Minister wants to make a statements, I cannot object do it the Chief

(MR. SPEAKER)

Minister and the Government can make a statement on the subject at any time. But so far as this Motion is concerned I have not decided about its admission so far.

ಶ್ರೀ ಹೆಚ್ ಬಿ ಜ್ವಾಲನಯ್ಯ:—ಇದು ಬಹು ಮುಖ್ಯವಾದ ವಿಚಾರ. ಮುಖ್ಯಮಂತ್ರಿಗಳು ನೀರಿನ ವಿವಾದದ ಚರ್ಚೆಗೆ ಹೋಗಿ ಬಂದಿದ್ದಾರೆ. ಅಲ್ಲಿ ಏನೇನು ನಡೆದಿದೆ ನಮಗೆ ಇನ್ನೂ ಗೊತ್ತಾಗಿಲ್ಲ, ಇದಕ್ಕಾಗಿ ಇಲ್ಲಿ ನಾವು ಒತ್ತಾಯ ತರುತ್ತಿರುವುದು.

MR. SPEAKER:—If the Chief Minister makes a request to make a statement I will agree.

SRI N. A. CHANNE GOWDA:—The Hon. Chief Minister was present But he did not make a statemnt This question is causing anxiety to the coming from the Cauvery basin area. It is such an important matter that it is a matter of life and death to them.

MR. SPEAKER:—Let us see whether the Hon. Chief Minister wants to make a statement. If he make a statement, the Hon. Member can seek clarifications.

ಶ್ರೀ ಹೆಚ್. ಎನ್. ನಂಜೇಗೌಡ:—ಅವರು ಸ್ಟೇಟುಮೆಂಟು ಮಾಡುತ್ತಾರೋ ಇಲ್ಲವೋ ನಮಗೆ ಗೊತ್ತಿಲ್ಲ.

ಅಧ್ಯಕ್ಷರು: ನಾನು ಅವರನ್ನು ಒತ್ತಾಯ ಮಾಡುವಂತಿಲ್ಲ. ಅವರಿಗೆ ಇಲ್ಲಿ ಸ್ಟೇಟುಮೆಂಟು ಮಾಡಬೇಕೆಂದು ಇಚ್ಛೆ ಇದ್ದರೆ ಅವರು ನನ್ನನ್ನು ಕೇಳಿದರೆ ಅದಕ್ಕೆ ಅವಕಾಶ ಕೊಡಬಹುದು. ರೂಲ್ಸ್ ಪ್ರಕಾರ ಸರಕಾರದವರು ಯಾವಾಗ ಬೇಕಾದರೂ ಹೇಳಿಕೆ ಕೊಡಬಹುದು.

SRI VEERENDRA PATIL:—I request the Chair to permit me to make a statment.

MR SPEAKER:—Yes.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು):—

ಮಾನ್ಯ ಅಧ್ಯಕ್ಷರೇ, ಮೊನ್ನೆ ಕಾವೇರಿ ನೀರಿನ ವಿವಾದದ ಬಗ್ಗೆ ಕೇಂದ್ರ ಮಂತ್ರಿಗಳ ಕರೆದಿದ ಮೀಟಿಂಗಿಗೆ ನಾನೂ ಹೋಗಿದ್ದೆ, ಅಲ್ಲಿ ಮದ್ರಾಸು ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಅವರ ಜೊತೆಯಲ್ಲಿದ್ದ ಅಧಿಕಾರಿಗಳು, ನಾನು ಮತ್ತು ನನ್ನಜೊತೆಯಲ್ಲಿ ಶ್ರೀಮಾನ್ ಬಿ. ರಾಚಯ್ಯನವರು, ಮತ್ತು ಕೇರಳದ ಒಬ್ಬರು ಮಂತ್ರಿಗಳು ಇವರೆಲ್ಲರೂ ಭಾಗ ವಹಿಸಿದ್ದರು. ನಾವು ಇದನ್ನು ಮೊದಲನೇ ಸಾರಿ ಚರ್ಚೆ ಮಾಡುತ್ತಿಲ್ಲ. ಇದರ ಬಗ್ಗೆ ಎರಡು ಮೂರು ಭಾರಿ ಚರ್ಚೆಯಾಗಿದೆ. ಈ ಸಲದ ಮೀಟಿಂಗು ಕೂಡ ಇದೇ ತರಹದ್ದು. ಸುಮಾರು ಮೂರು ಮೂರೂವರೆ ಗಂಟೆಗಳ ಕಾಲ ಇಲ್ಲಿ ಚರ್ಚೆಯಾದ ಮೇಲೆ ಇದೇ ತಿಂಗಳು ೨೭ನೇ ತಾರೀಖು ಮದರಾಸಿನಲ್ಲಿ ಸಭೆ ಸೇರಬೇಕೆಂದು ಒಂದು ನಿರ್ಣಯ ಈ ಸಭೆಯಲ್ಲಿ ಮಾಡಲಾಯಿತು. ೨೭ನೇ ತಾರೀಖಿನ ಸಭೆ ಒಂದು ರೀತಿಯಲ್ಲಿ ಪ್ರಾಮುಖ್ಯವಾದುದು ಎಂದು ಹೇಳಬೇಕಾಗಿದೆ. ೨೭ನೇ ತಾರೀಖಿನ ದಿನ ಬಹುಶಃ ಒಂದು ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವೇನೋ ಎಂದು ನನಗೆ ನಿಸುತ್ತದೆ. ಇದರಲ್ಲಿ ಒಂದು ಅಂತಿಮ ನಿರ್ಧಾರವನ್ನು ಒಂದು ಸಮಾಧಾನಕರವಾದ ಹಾದಿಯಲ್ಲಿ ಹುಡುಕುವುದರಲ್ಲಾಗಲೀ ಅಥವಾ ಒಂದು ತರಹ ಸೊಲ್ಯೂಷನ್ ಹುಡುಕುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಮುಂಚಿ

ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನು ಕೇಂದ್ರ ಸರ್ಕಾರದವರು ಆಲೋಚನೆ ಮಾಡಬಹುದು. ಈ ಒಂದು ಪರಿಸ್ಥಿತಿಯಲ್ಲಿ ಈ ಪ್ರಶ್ನೆ ಇದೆ. ನಾನಾಗಲೇ ಹೇಳಿದ ಹಾಗೆ ಅನೇಕ ಸಲ ಇದರ ಚರ್ಚೆಯಲ್ಲಿ ಭಾಗವಹಿಸಿದ್ದೇನೆ. ಕಾವೇರಿ ನದಿ ನೀರಿನ ವಿವಾದದ ಬಗ್ಗೆ, ಹಂಚಿಕೆ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇನೆ ಮತ್ತು ಚೀಫ್ ಮಿನಿಸ್ಟರ್ಸ್ ಕಾನಫರೆನ್ಸ್‌ಗೆ ಹೋದಾಗಲೂ ಕೂಡ ಪ್ರತಿಯೊಂದು ಸಲವೂ ಇದರ ಬಗೆ ಇನ್‌ಸಿಸ್ಟ್ ಮಾಡುತ್ತಲೇ ಇದ್ದೇನೆ ಅಲ್ಲಿ ಕಾನಫರೆನ್ಸಿನಲ್ಲಿ ನಡೆದ ಮಾತು ಕತೆಗಳ ಬಗ್ಗೆ ಯಾವ ತರದ ರಿಕಾರ್ಡಾಗಲೀ ಪ್ರೊಸೀಡಿಂಗ್ಸ್ ಆಗಲೀ, ಅದನ್ನು ಕನಫರ್ಮೇಷನ್ ಮಾಡುವುದಾಗಲೀ ಮಾಡುತ್ತಾ ಇಲ್ಲ ಎನ್ನುವ ಮಾತನ್ನು ಆಗಲೇ ಹೇಳಿದ್ದೇನೆ. ಇದರ ಬಗ್ಗೆ ನಾನು ಹೇಳುವುದು ಏನಾದರೂ ಸಮಾಧಾನಕರವಾದ ಒಂದು ಸಮ್ಮತಿ ಸಿಕ್ಕರೆ ಉತ್ತಮ ಸಿಗಲಾರದೇ ಹೋದರೆ ಈ ಪ್ರಶ್ನೆ ಟ್ರಿಬ್ಯುನಲ್‌ಗೆ ಮುಂದೆ ಹೋದಾಗ ಈ ತರಹದ ಪ್ರೊಸೀಡಿಂಗ್ಸ್‌ಗಳು ಇದ್ದರೆ ಆಗ ಅದನ್ನು ಅವರು ಉಪಯೋಗ ಮಾಡಿಕೊಳ್ಳಲು ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಯಾವ ಪ್ರೊಸೀಡಿಂಗು ಕೂಡ ಆಗಬಾರದು ಎಂದು ಇಲ್ಲಿಯವರೆಗೆ ನಾವು ಇಲ್ಲಿ ಯಾವ ಪ್ರೊಸೀಡಿಂಗನ್ನೂ ಡ್ರಾ ಮಾಡಲ್ಲಿಲ್ಲ. ಹೀಗೆ ಪ್ರೊಸೀಡಿಂಗು ಡ್ರಾ ಮಾಡುವುದಾಗಲೀ ಯಾವುದೇ ಆಕ್ಕೈರು ತೀರ್ಮಾನ ಅಥವಾ ಕನ್‌ಪರ್‌ಮೇಷನ್ ಮಾಡುವುದಾಗಲೀ ಮಿನಿಟ್ ಮಾಡುವುದಾಗಲೀ ಇದರ ಬಗ್ಗೆ ಕೇಂದ್ರ ಸರ್ಕಾರ ಮಾಡಲು ಅವಕಾಶ ಕೊಟ್ಟಿಲ್ಲ. ಮೊನ್ನೆ ನಡೆದ ಸಭೆಯಲ್ಲೂ ಕೂಡ ಯಾವ ಪ್ರೊಸೀಡಿಂಗು ಕೂಡ ಡ್ರಾ ಆಗಲಿಲ್ಲ: ಆದರೆ ನಾನು ಇಲ್ಲಿ ಈ ಸಭೆಯಲ್ಲಿ ಮಾತನಾಡುವುದಿಲ್ಲ ರಿಕಾರ್ಡು ಆಗುತ್ತದೆ ಮತ್ತು ಇದು ಒಂದು ಪಬ್ಲಿಕ್ ಡಾಕ್ಯುಮೆಂಟು ಆಗುತ್ತದೆ. ಇದನ್ನು ಹೊರಗೆ ಇತರರು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇದರ ಬಗ್ಗೆ ನಾನು ಅನೇಕ ವಿರೋಧ ಪಕ್ಷದ ನಾಯಕರಿಗೂ ಹೇಳಿದ್ದೇನೆ. ಇದು ಬಹಳ ಮಹತ್ವವಾದ ಮತ್ತು ಜಟಿಲವಾದ ಪ್ರಶ್ನೆ ಮತ್ತು ಲಕ್ಷಾಂತರ ಜನರಿಗೆ ಸಂಬಂಧಪಟ್ಟ ಪ್ರಶ್ನೆಯೂ ಆಗಿರುವುದರಿಂದ ಇವೊತ್ತಿನ ಸಿತಿಯಲ್ಲಿ ನನಗನಿಸುವುದು ಅಲ್ಲಿ ಏನೇನು ನಡೆಯಿತು ಅದನ್ನು ಈ ಮನೆಯಲ್ಲಿ ಚರ್ಚೆ ಮಾಡುವುದು ನಮ್ಮ ಹಿತ ದೃಷ್ಟಿಯಿಂದ ಅಷ್ಟು ಸರಿಯಾದುದಲ್ಲ. ಇದರ ಬಗ್ಗೆ ಈ ಮನೆಯಲ್ಲಿ ಚರ್ಚೆಯಾದರೆ ಇದನ್ನು ಉಪಯೋಗ ಮಾಡಿಕೊಳ್ಳುವ ಅವಕಾಶ ಎರಡನೇ ರಾಜ್ಯಗಳಿಗೆ ಇರುತ್ತವೆ. ಇದರ ಮೇಲೆ ಇನ್ನೂ ಹೆಚ್ಚು ತಿಳಿಯ ಬೇಕೆಂದು ಆಸೆ ಇದ್ದರೆ ನಮ್ಮ ವಿರೋಧ ವರ್ಷದ ನಾಯಕರುಗಳು ನನ್ನಲ್ಲಿಗೆ ಬಂದರೆ ಅವರೊಡನೆ ಏನೇನು ನಡೆದಿದೆ ಎನ್ನುವುದನ್ನು ಸವಿಸ್ತಾರವಾಗಿ ತಿಳಿಸಲು ಅಪೇಕ್ಷೆ ಮಾಡುತ್ತೇನೆ. ಇಷ್ಟುಮಾತ್ರ ಇಲ್ಲಿ ಖಡಾಖಂಡಿತವಾಗಿ ಹೇಳುತ್ತೇನೆ. ಈ ಮನೆಯಲ್ಲಿ ಈ ನೀರಿನ ವಿವಾದದ ಬಗ್ಗೆ ಚರ್ಚೆ ಏನೇನು ನಡೆದಿದೆ ಎಂಬುದರ ಬಗ್ಗೆ ಚರ್ಚೆ ಮಾಡಲು ಪ್ರಾರಂಭ ಮಾಡಿದರೆ ಇದರಿಂದ ನಮ್ಮ ಹಿತಕ್ಕೆ ಧಕ್ಕೆಯಾಗುತ್ತದೆಯೇ ವಿನಾ ಅನುಕೂಲವೇನೂ ಆಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರ ಪರವಾನಿಗೆಯನ್ನು ಪಡೆದು ಅವರು ತಮ್ಮ ಸ್ಟೇಟ್‌ಮೆಂಟನ್ನು ಮಾಡುತ್ತಿಲ್ಲ. ಸಭೆಯ ಅನುಮತಿಯಿಲ್ಲದೆ ಸರ್ಕಾರದವರು ಯಾವಾಗ ಬೇಕಾದರೂ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲಿದೆ ? ಅಲ್ಲವೆ ಅವರು ಅಲ್ಲಿ ನಡೆದ ವಿಷಯ ಗಳನ್ನೆಲ್ಲಾ ಇಲ್ಲಿ ಚರ್ಚೆ ಮಾಡಿದರೆ ಅದರಿಂದ ನಮ್ಮ ರಾಜ್ಯಕ್ಕೆ ಅಹಿತವಾಗಬಹುದು ಎಂದು ಬೇರೆ ಹೇಳುತ್ತಿದ್ದಾರೆ. If he wants to volunteer himself he must make a special request to the Chair that he wants to make a statement and that he may be permitted to do so. Then only the Speaker can permit him. So we are thinking that some of the rules are violated just to create an opportunity for Government to evade the issue. This is not proper on the part of Government and it is not in the interests of the State.

MR. SPEAKER :—I am sorry the Hon. Member Sri K. H. Patil did not hear the Leader of the Opposition making a suggestion that the Leader of the House may make a statement. He made that suggestion not in a loud tone and so the Hon. Member might not have heard it.

SRI K. H. PATIL :—Did the Hon. Chief Minister requests the chair to permit him to make a statement.

MR. SPEAKER :—Yes.

SRI K. H. PATIL :—We have not heard. The record may be looked into. If he requested you and if you have permi tted him, then I with draw my abjection I have also considered this and I have taken the advice of my friends here and we felt that the Speaker has ignored the provisions of the rules and then only I stood up with my objection.

MR. SPEAKER :—Hon. Member should accept when I say that the Hon. Chief Minister made request and then I permitted him.

SRI K. H. PATIL :— If he makes a statement, how can it be treated as confidential ? We are going to ask so many questions on it.

MR. SPEAKER :—You can ask for clarifications.

SRI K. H. PATIL :—We have to request you to allow us to move a motin that the statement be considered on the floor of the House.

ಶ್ರೀ ಕೆ. ಪ್ರಭಾಕರ್ (ವರ್ತೂರು) :—ಸ್ವಾಮಿ ನಾನೊಂದು ಕ್ರಿಯಾಲೋಪವನ್ನು ಸೂಚಿಸ ಬೇಕಾಗಿದೆ. ಅಧ್ಯಕ್ಷರು ಈಗ ತಾನೆ ಒಬ್ಬ ಮಾನ್ಯ ಸದಸ್ಯರಿಗೆ ಹೇಳುತ್ತಿದ್ದರು-ತಾವು ಕೊಟ್ಟ ಮೋಷನ್ನನ್ನು ಈಗ ತಾನೆ ನನ್ನ ಗಮನಕ್ಕೆ ತಂದಿದ್ದಾರೆ ಎಂದು ಆದರೆ ನಾನಾಗಲೇ ಅದನ್ನು ಕಳುಹಿಸಿದ್ದೇನೆಂದು ಅವರು ಹೇಳುತ್ತಿದ್ದರು. ಇಂಥ ವಿಚಾರಗಳಲ್ಲಿ ಸರ್ಕಾರ ಯಾವಾಗ ಮನಸ್ಸು ಬಂದರೆ ಆಗ ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಉಂಟೆ ? ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರ ಪರ್ಮಿಷನ್ ಇಲ್ಲದೆ ಸ್ಟೇಟ್‌ಮೆಂಟ್ ಮಾಡಬಹುದೆ ? ಇದಕ್ಕೆಲ್ಲಾ ಅವಕಾಶ ಕಲ್ಪಿಸಕ್ಕೆ ರೂಲ್ಸ್‌ಗಳು ಯಾವುವು ? ಅಥವಾ ಇವುಗಳನ್ನು ಅಧ್ಯಕ್ಷರು ಒಂದು ಒಳ್ಳೆಯ ಕನ್‌ವೆನ್‌ಷ್ ಎಂದು "ಆಲೋ" ಮಾಡುತ್ತಿದ್ದಾರೆಯೇ?

MR. SPRAKER :— I hold that there is no point of order.

SRI K. PRABHAKAR:—The rule that has been violated has been noted by my Hon. Friend.

MR. SPEAKER :—There is no point of order. Hon. Member cannot challenge my ruling. Being an *ex-Minister* and a senior Member of the House the HON. Member must know that when the Speaker gives a ruling it is final and it cannot be challenged.

ಶ್ರೀ ವೀರೇಂದ್ರ ಪಾಟೀಲ್ :—ನನಗೆ ಇನ್ನು ಕೇವಲ್ ೯೦ ನಿಮಿಷಗಳನ್ನು ಕೊಟ್ಟಿದ್ದರೆ ನನ್ನ ಸ್ಟೇಟ್‌ಮೆಂಟ್ ಮುಗಿದು ಹೋಗುತ್ತಿತ್ತು. ನಾನು ಆಗ ಏನು ಹೇಳುತ್ತಿದ್ದೆ ಎಂದರೆ, ನಾನು ದೆಹಲಿಗೆ ಹೋಗಿದ್ದಾಗ ಈ ಕಾವೇರಿ ನೀರಿನ ಬಗ್ಗೆ ಅಲ್ಲೇನು ಚರ್ಚೆ ನಡೆಯಿತು ಎನುವುದನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದರಿಂದ ನಮಗೆ ಆಗತಕ್ಕ ಹಿತಕ್ಕಿಂತ ಅಹಿತವೇ ಜಾಸ್ತಿ ಎಂದು ಹೇಳುತ್ತಿದ್ದೆ. ಆದ್ದರಿಂದ ನಾನು ಅಧ್ಯಕ್ಷರ ಅನುಮತಿ ಪಡೆದು ತಮ್ಮ ಮೂಲಕ ಸಭೆಗೆ ನಾನು ತಿಳಿಸಬೇಕಾದ್ದು ಏನು ಎಂದರೆ ನಾವು ಈ ವಿಚಾರವನ್ನು ಆ ಕಾವೇರಿ ವ್ಯಾಲಿಯಲ್ಲಿರತಕ್ಕ ಜನರ ಹಿತದೃಷ್ಟಿಯಿಂದ ಇಲ್ಲಿ ಇದನ್ನು ಚರ್ಚೆ ಮಾಡುವುದು ಬೇಡ ಅನ್ನುವುದು ನನ್ನ ಅಭಿಪ್ರಾಯ. ಆದರೆ ಈ ವಿಚಾರದಲ್ಲಿ ಸವಿಸ್ತಾರವಾಗಿ ವಿಚಾರಗಳನ್ನು ತಿಳಿದು ಕೊಳ್ಳಬೇಕು ಅನ್ನುವುದಾಗಿದ್ದಾಗ ಆ ಸಂಬಂಧಪಟ್ಟ ಜನರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಶಾಸನ ಸಭೆಯ ಸದಸ್ಯರುಗಳನ್ನು ಅಲಾಯಿಧೆಕರೆದು ಎಲ್ಲ ವಿಷಯಗಳನ್ನು ಹೇಳುವುದಕ್ಕೆ ನಾನು ಸಿದ್ಧವಾಗಿದ್ದೇನೆ

ಶ್ರೀ ಎನ್. ಎ ಚನ್ನೇಗೌಡ :—ತಾವು ಈಗತಾನೆ ತಿಳಿಸಿದಂತೆ ಮತ್ತೆ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇದೇ ತಿಂಗಳು ೨೭ಕ್ಕೆ ಮದ್ರಾಸಿಗೆ ಹೋಗಬೇಕೆಂದು ತಿಳಿಸೋಣವಾಯಿತು. ಆದರೆ ಹಾಗೆ ಅಲ್ಲಿಗೆ ಹೋಗುವುದಕ್ಕೆ ಮುಂಚೆ ಈ ಕನ್‌ಸಲ್ಟೇಷನ್ ನಡೆಸುತ್ತೀರಾ? ಇದಕ್ಕೆ ಸಂಬಂಧಪಟ್ಟ ಜನರನ್ನು ಕರೆಸಿ ಅವರೊಂದಿಗೆ ವಿಚಾರ ವಿನಿಮಯ ನಡೆಸುತ್ತೀರಾ ?

ಶ್ರೀ ಬಿ. ಪಿ. ಗಂಗಾಧರ್ :—ಕೆಲವು ಲೀಡರುಗಳನ್ನು ಮತ್ತು ಕೆಲವು ಸಂಬಂಧಪಟ್ಟ ಶಾಸನ ಸಭಾ ಸದಸ್ಯರನ್ನು ಕರೆಸಿ ಮಾತನಾಡುವುದಕ್ಕಿಂತ ಈ ಸಭೆಯ ಎಲ್ಲ ಮಾನ್ಯ ಸದಸ್ಯರನ್ನೂ ತಮ್ಮ ಛೇಂಬರಿಗೆ ಕರೆಸಿ ಎಲ್ಲರನ್ನೂ ತಮ್ಮ ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ತಾವೇಕೆ ಚರ್ಚೆ ಮಾಡಬಾರದು ?

SRI D. B. KALAMANKAR :—I agree with the suggestion made by the Chief Minister that in the larger interests of the State the matter may not be discussed here on the floor of the House. It was said by the Chief Minister that the Leader of the various Opposition Parties will be called and then they will be made known about the proceedings. But I think that all the Hon. Members of this House are equally interested in the matter because every Hon. Member is a responsible member and he is interested in the developments on vital issues affecting the State. So I would like to ask whether it would not be proper if a record is prepard and copies of the same are circulated to all the Hon. Members of this House so that they may be kept abreast abreast of the latest development.

2-30 P.M.

SRI M. S. KRISHNAN :—The Hon. Chief Minister was pleased to state that he would call the leaders of the various parties and discuss the matter. Of course, he has been taking the leaders of the parties in to confidence. As some hon. Members have stated, this is an issue where a decision has to be taken immediately. But in what direction it will be decided is not yet known. We are concerned with the manner and approach which the Government may adopt in regard to this particular problem. I suggest that it would be better to have in-camera meeting of the Assembly members and the Chief Minister may tell us his views of that meeting.

SRI L SRIKANTAIAH :—We do not know whether the meeting was informal of whether the points of difference between Kerala and Mysore, Kerala and Madras were pin-pointed and issues have been framed and whether the concerned parties have been called at the meeting.

SRI S. R. BOMMAI :—From the reports in the Press we learn that the matter is likely to be referred to a Tribunal and that the Government of India is inclined to refer it to a Tribunal under pressure from the other party. If that is so, what measures have been taken by our Government and whether they have consulted the legal experts. Also, I want to know whether such a subject was discussed in the Tamil Nadu Assembly, and if so what were the discussions.

ಶ್ರೀ ಎಚ್. ಎನ್. ನಂಜೇಗೌಡ .—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಸರ್ಕಾರದಿಂದ ಉತ್ತರ ಬರಬೇಕು ಅಂತಲ್ಲ. ದೇಶದ ಹಿತದೃಷ್ಟಿಯಿಂದ ಇದರಲ್ಲಿ ನಮ್ಮ ನಮ್ಮ ಜವಾಬ್ದಾರಿಯೂ ಇದೆ ಎಂದು ತಿಳಿದುಕೊಂಡಿದ್ದೇವೆ. ನಮ್ಮ ಕರ್ತವ್ಯವಾಲನೆ ಮಾಡಬೇಕಾದರೆ ನಮ್ಮ ಹೇಳಿಕೆಯನ್ನು ಕೇಳಿ. ದೇಶಕ್ಕೂ ಗೊತ್ತಾಗಲಿ, ಜನರಿಗೂ ಗೊತ್ತಾಗಲಿ. ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಆಮೇಲೆ ಅವರು ಉತ್ತರ ಕೊಡಲಿ.

MR. SPEAKER.—With regard to the point raised by the hon. Membe Sri Nanje Gowda, I have already stated that I have not taken a decision regarding the admissibility or otherwise. The statement made by the Hon. Chief Minister won't influence me either way. I shall take an independent decision.

SRI H. N. NANJE GOWDA .—It would not help the motion to be admitted; it would only help you to disallo the motion ಮುಂದೆ ಬರಬೇಕಾದಂಥ ಸೂಚನೆ ಈಗ ಇಡುವುದು ಒಳ್ಳೆಯದು. ಆದುದರಿಂದ ಇಂದು ಪ್ರತ್ಯೇಕವಾಗಿ ಈ ಒಂದು ಚರ್ಚೆ ನಡೆಯಬೇಕೆಂಬುದಾದ್ದು ಒಳ್ಳೆಯದು Our notice is, that the situation arising out of the latest approach of the Government of India regarding the dispute on Cauvery waters to be taken into consideration. ಅದಕ್ಕೋಸ್ಕರ ನಾವು ನೋಟೀಸ್ ಕೊಟ್ಟಿದ್ದೇವೆ. ಆ ನೋಟೀಸ್ ಏನು ಇದೆ ಅದನ್ನು ಆಲೋಚನೆ ಮಾಡಬೇಕು ಎಂದು ನಾನು ತಮ್ಮನ್ನು ಅರಿಕೆ ಮಾಡಿಕೊಳ್ಳುತ್ತೇನೆ.

MR SPEAKER .—I shall give my decision tomorrow.

ಶ್ರೀ ವೀರೇಂದ್ರಪಾಟೀಲ್ .—ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಮುಂದಿನ ತಿಂಗಳು ಈ ಕಾವೇರಿ ಬಗ್ಗೆ ೨೭ನೇ ತಾರೀಖು ಮೀಟಿಂಗ್ ಏನು ಇಟ್ಟುಕೊಂಡಿದ್ದಾರೋ ಅದಕ್ಕೆ ಮೊದಲು ಇನ್‌ಫ್ಯಾಮರಾ ಮೀಟಿಂಗ್ ಮಾಡಿ ಚರ್ಚೆ ಮಾಡುವುದಕ್ಕೆ ಸಾಧ್ಯ ಇದೆಯೇ ಎನ್ನುವ ವಿಚಾರ ಕೇಳಿದ್ದಾರೆ. ಆ ತರಹ ವಿಚಾರದಲ್ಲಿ ನಾವು ಇನ್‌ಫ್ಯಾಮರಾ ಮೀಟಿಂಗ್ ಮಾಡುವುದು ವಿಹಿತವಲ್ಲ. ಈ ಚರ್ಚೆಯನ್ನು ರಿಕಾರ್ಡ್ ಮಾಡದೇ ಚರ್ಚೆ ಮಾಡುವುದಾಗಲಿ, ರಿಕಾರ್ಡ್ ಮಾಡಿ ಚರ್ಚೆ ಮಾಡುವುದಾಗಲಿ ಅದು ಒಳ್ಳೆಯದಲ್ಲ. ಆದರೆ ಮುಖ್ಯವಾದ ಪಾರ್ಟಿ ಲೀಡರ್ಸ್‌ಗಳನ್ನು ಕರೆದು ಈಗ ಏನಾಗಿದೆ ಎಂದು ವಿಚಾರ ಮಾಡುತ್ತೇನೆ. ಮುಂದೆ ನಾವು ಯಾವ ರೀತಿ ಹೋಗಬೇಕು ಎನ್ನುವುದನ್ನೂ ಕೂಡ ಅದನ್ನು ತಿಳಿಸುತ್ತೇನೆ. ಈಗಲೂ ಎಲ್ಲಾ ಸಮಸ್ಯೆಗಳನ್ನೂ ಅದೇ ತರಹ ಮಾಡಿಕೊಂಡು ಬರುತ್ತಾ ಇದ್ದೇನೆ. ಮುಂದೆಯೂ ಅದೇ ರೀತಿ ಮಾಡುತ್ತೇನೆ.

ಇನ್ನು ಶ್ರೀ ಮಾನ್ ಬೊಮ್ಮೈನವರು ಒಂದು ಮಾತು ಹೇಳಿದರು. ಅದು ಏನೆಂದರೆ ಇದು ಟ್ರಿಬ್ಯೂನಲ್‌ಗೆ ಹೋಗುವ ಹಾಗೆ ಕಾಣಿಸುತ್ತಾ ಇದೆ. ಅದಕ್ಕೆ ನಿಮೇನಾದರೂ ಸಿದ್ಧತೆಗಳನ್ನು ಮಾಡಿಕೊಂಡಿದ್ದೀರಾ ಎಂದು ಕೇಳಿದರು. ಆದರೆ ಇದರ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ನಮ್ಮ ದೇಶದ ಹಿತರಕ್ಷಣೆಗೆ ಮತ್ತು ನಮ್ಮ ನ್ಯಾಯವನ್ನು ದೊರಕಿಸಿಕೊಳ್ಳುವುದಕ್ಕೆ ಏನು ಬೇಕೋ ಆ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ ಎನ್ನುವ ಭರವಸೆಯನ್ನು ನೀಡುತ್ತೇನೆ ಮತ್ತು ಇನ್ನೊಂದು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರವಾಗಿ ಹೇಳಬೇಕಾದರೆ ತಮಿಳುನಾಡು ಅಸೆಂಬ್ಲಿಯಲ್ಲಿ ಕಾವೇರಿ ಪ್ರಶ್ನೆ ಬಂದಾಗ, ಅಲ್ಲಿ ಇಷ್ಟೊಂದು ಚರ್ಚೆ ಆಗಿಲ್ಲ ದೇಶದ ಹಿತದೃಷ್ಟಿಯಿಂದ ಇದು ಚರ್ಚೆ ಆಗಬಾರದು ಎನ್ನುವ ಒಂದು ವಾತಾವರಣಕ್ಕೆ ಬಂದಿದ್ದಾರೆ. ಅದು ಚರ್ಚೆ ಆದರೆ ಪೇಪರ್‌ನಲ್ಲೂ ಬರುತ್ತದೆ, ಪ್ರೊಸೀಡಿಂಗ್ಸ್‌ನಲ್ಲೂ ಬರುತ್ತದೆ, ರಿಕಾರ್ಡ್ ಆಗುತ್ತದೆ ಎನ್ನುವ ಭಯ ಬರುತ್ತದೆ ಇದನ್ನು ಪ್ರಸ್ತಾಪನೆ ಮಾಡಬೇಕಾದರೆ ಕಾವೇಲ್ಲಾ ಟೇಂಬರ್‌ನ ಒಳಗಡೆ ಬಂದು ಪ್ರಸ್ತಾಪ ಮಾಡುವುದು ವಿಹಿತವಾದುದು ಎಂದು ನಾನು ತಿಳಿದುಕೊಂಡಿದ್ದೇನೆ.

CALLING ATTENTIC TO MATTER OF URGENT PUBLIC IMPORTANCE

(Re: Posting of D.D.P. I. in Hassan District)

ಶ್ರೀ ಹೆಚ್. ಬಿ. ಜ್ವಾಲನಯ್ಯ :—ನಾನು ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರ ಕೊಂದನ್ನು ಎಂದರೆ, ಹಾಸನ ಜಿಲ್ಲೆಗೆ ಸಹಾಯಕ ಶಿಕ್ಷಣಾಧಿಕಾರಿಯೊಬ್ಬರನ್ನು ನೇಮಿಸದಿರುವ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಹಾಸನ ಜಿಲ್ಲೆಯಲ್ಲಿ ವಿದ್ಯಾ ಇಲಾಖೆಯ ಡೆಪ್ಯೂಟಿ ಡೈರೆಕ್ಟರವರು ಇಲ್ಲದೇ ಬಹಳ ತೊಂದರೆಯಾಗಿದೆ ಎಂಬ ವಿಷಯದಲ್ಲಿ ಈ ಕೆಳಗೆ ಕಾಣಿಸಿರುವಂತೆ ವಿವರಿಸಲಾಗಿದೆ.

ಸರ್ಕಾರದ ಆಜ್ಞೆ ಕ್ರಮಾಂಕ ಇಡಿ ೪೨ ಎಂಪಿಇ ದಿನಾಂಕ ೨೨–೬–೭೦ ರ ಪ್ರಕಾರ ವಿದ್ಯಾ ಇಲಾಖೆಯನ್ನು ೧–೭–೭೦ ರಿಂದ ಪುನರ್ವ್ಯವಸ್ಥಿತಗೊಳಿಸಲಾಯ್ತು. ಸರ್ಕಾರಿ ಆಜ್ಞೆ ಕ್ರಮಾಂಕ ಇಡಿ ೬೯೦ ಡಿಪಿಐ ೭೦ ದಿನಾಂಕ ೧–೭–೭೦ರ ಪ್ರಕಾರ ಹಾಸನ ಜಿಲ್ಲೆಯ ಡೆಪ್ಯೂಟಿ ಡೈರೆಕ್ಟರ್ ಅವರ ಹುದ್ದೆಯನ್ನು ಡಿಪಿಐ ಆಫೀಸಿನಲ್ಲಿ ಸೀನಿಯರ್ ಅಸಿಸ್ಟೆಂಟ್ ಡಿಪಿಐ ಆಗಿದ್ದ ಶ್ರೀಮತಿ ಜುಲೇಖಾಬೀಯವರನ್ನು ವರ್ಗಾಯಿಸಿ, ಭರ್ತಿ ಮಾಡಲಾಯ್ತು. ಅವರು ದಿನಾಂಕ ೯–೭–೭೦ ರಂದು ಹಾಸನ ಜಿಲ್ಲೆಯ ಡೆಪ್ಯೂಟಿ ಡೈರೆಕ್ಟರ್ ಹುದ್ದೆಯನ್ನು 'ಇನ್‌ಛಾರ್ಜ್' ಆಗಿ ವಹಿಸಿಕೊಂಡರು. ಆದರೆ, ಅವರು ತಮ್ಮ ಪತಿಯ ಆಕಸ್ಮಾತ್ ನಿಧನದಿಂದ ದಿನಾಂಕ ೧೫–೯–೭೦ರಿಂದ ರಜೆಯ ಮೇಲೆ ತೆರಳಿದರು. ಸಧ್ಯದಲ್ಲಿ ಹಾಸನದ ಡಿ.ಡಿ.ಪಿ.ಐ. ಆಫೀಸಿನಲ್ಲಿ ವಿದ್ಯಾಧಿಕಾರಿಗಳಾಗಿರುವ ಶ್ರೀ ಬಿ. ಹನುಮಂತಯ್ಯನವರು ತಮ್ಮ ಕೆಲಸದ ಜೊತೆಗೆ ೧೩-೭-೭೦ ರಿಂದ ಡಿ.ಡಿ.ಪಿ.ಐ. ಕೆಲಸವನ್ನೂ ನಿರ್ವಹಿಸುತ್ತಿದ್ದಾರೆ. ಆದಾಗ್ಯೂ ಶ್ರೀಮತಿ ಜುಲೇಖಾಬೀ ಅವರಿಗೆ ರಜೆಯನ್ನು ಇನ್ನೂ ಮುಂದುವರಿಸದೆ, ಈ ಕೂಡಲೆ ಕೆಲಸಕ್ಕೆ ಹಾಜರಾಗಲು ಡಿ.ಪಿ.ಐ. ಅವರು ಆದೇಶವನ್ನು ಕಳುಹಿಸಿದ್ದಾರೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ :—ಸ್ವಾಮಿ, ಈಗತಾನೇ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿರುವಂತೆ ತಾವು ಹಾಸನ ಜಿಲ್ಲೆಗೆ ಶ್ರೀಮತಿ ಜುಲೇಖಾಬಿಯವರನ್ನು ಕಳುಹಿಸಿಕೊಟ್ಟಿರಿ. ಆದರೆ ಅವರ ಪತಿ ಆಕಸ್ಮಾತ್ ಆಗಿ ದಿವಂಗತರಾದರು. ಆದರೂ ಅವರು ಬರುವುದಿಲ್ಲ ಎಂದರೂ ಅವರನ್ನೇ ಒತ್ತಾಯ ಮಾಡಿ ಕಳುಹಿಸುತ್ತಾ ಇದ್ದೀರಿ. ಮತ್ತು ಅವರಿಗೆ ಹೋಗುವಂತೆ ನೋಟೀಸ್ ಕೊಟ್ಟಿದ್ದೀರಿ. ಯಾರಾದರೂ ಆಗಲಿ ಈ ರೀತಿ ತಮ್ಮ ಯಜಮಾನರು ದಿವಂಗತರಾದರೆ ಅವರು ಹೋಗಿ ಕೆಲಸ ಮಾಡುತ್ತಾರೆಯೇ ? ಆದುದರಿಂದ ಅವರ ಬದಲು ಬೇರೆ ಯಾರನ್ನಾದರೂ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ? ಅದಕ್ಕೆ ನಿಮಗೆ ಸಾಮರ್ಥ್ಯವಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಮಹಿಳೆಯಾದ ಮಾತ್ರಕ್ಕೆ ಸಾಮರ್ಥ್ಯವಿಲ್ಲವೆಂದಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ :— ನಿಮಗೆ ಸಾಮರ್ಥ್ಯವಿದೆಯೇ ಎಂದು ನಾನು ಕೇಳಿದ್ದು. ಅವರು ಬರುವುದಿಲ್ಲವೆಂದರೆ ಏಕೆ ಒತ್ತಾಯ ಮಾಡುತ್ತೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ರಜೆ ಮೇಲೆ ಹೋಗಿರುವುದರಿಂದ ಇನ್‌ಛಾರ್ಜ್ ಅರೇಂಜ್‌ಮೆಂಟ್ಸ್ ಮಾಡಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ :—ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಿರುವುದರಿಂದ ಡಿ.ಇ.ಓ. ಕೆಲಸವೂ ಆಗುತ್ತಿಲ್ಲ, ಡಿ.ಡಿ.ಪಿ.ಐ. ಕೆಲಸವೂ ಆಗುತ್ತಿಲ್ಲ. ಈಗಲಾದರೂ ಹಾಸನ ಜಿಲ್ಲೆಗೆ ಬೇರೆಯವರನ್ನು ಡಿ.ಡಿ.ಪಿ.ಐ. ಆಗಿ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ದಯವಿಟ್ಟು ಕಳುಹಿಸಿಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Sri. AZIZ SAIT:—I do not know whether the Hon. Deputy Minister si aware that the Husband of the Lady D.D.P.I. died and the the said D.D.P.I is trying to get herself transferred to some other place ? The Government is sleeping over the matter. I do not know what is the wrong with the Education Department, I want to know whether the staff of the Department including the Minister are having a sense of duty ?

Sri. N. M. KOTRABASAIAH SOGI: —Harsh words should not be used. Everybody is doing his duty. I can understand the sentiments of the hon. Member. In the meanwhile we will look to her comforts also.

ಶ್ರೀ ಎಚ್. ಬಿ ಜ್ವಾಲನಯ್ಯ :—ಹಾಸನ ಜಿಲ್ಲೆ ಬೇಡ ಎಂದು ಆ ಮಹಿಳೆ ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಆಕೆ ಹೆಂಗಸು, ಗಂಡನನ್ನು ಕಳೆದುಕೊಂಡಿದ್ದಾರೆ. ದಯವಿಟ್ಟು ಅವರನ್ನು ಬೇರೆ ಕಡೆಗೆ ಹಾಕಿ ಹಾಸನ ಜಿಲ್ಲೆಗೆ ತಕ್ಷಣ ಯಾರಾದರೂ ಒಬ್ಬರು ಬೇರೆಯವರನ್ನು ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ :—ಹಾಸನದಲ್ಲಿ ಡಿ.ಡಿ.ಪಿ.ಐ. ಸ್ಥಾನಕ್ಕೆ ಯಾರನ್ನೂ ಹಾಕಿಲ್ಲ. ಡಿ.ಇ.ಓ. ಅವರು ಡಿ.ಡಿ.ಪಿ.ಐ. ಕೆಲಸವನ್ನೂ ನೋಡಿಕೊಳ್ಳುವಂತೆ ಮಾಡಿದ್ದೀರಿ; ಅವರು ಉಪಾಧ್ಯಾಯರು ಯಾರನ್ನಾದರೂ ವರ್ಗ ಮಾಡಬೇಕಾದರೆ ೧೫೦ ರೂಪಾಯಿ, ೨೦೦ ರೂಪಾಯಿ, ೨೫೦ ರೂಪಾಯಿ ಫೀ ತೆಗೆದುಕೊಳ್ಳುತ್ತಾರೆಂದು ಅನೇಕ ಜನ ಉಪಾಧ್ಯಾಯರು ನನಗೆ ಹೇಳಿದ್ದಾರೆ. ಡಿ.ಇ.ಓ ಅವರು ಈ ರೀತಿ ಫೀ ತೆಗೆದುಕೊಂಡು ಮಾಡಿರುವ ಟ್ರಾನ್ಸ್‌ಫರುಗಳ ಗತಿ ಏನು ? ಇದರ ಬಗ್ಗೆ ದೂರುಗಳೇನಾದರೂ ಬಂದಿವೆಯೇ ? ಬಾರದೆ ಇದ್ದರೆ ನಮಗೆ ಕೆಲವು ಅಧ್ಯಾಪಕರುಗಳು ದೂರು ಕೊಟ್ಟಿದ್ದಾರೆ. ಸಾಕ್ಷ್ಯ ಸಹಿತ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಲ್ಲೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಮಾನ್ಯ ಸದಸ್ಯರು ಹೇಳಿರತಕ್ಕ ಯಾವ ತರಹ ದೂರುಗಳೂ ಸರ್ಕಾರಕ್ಕೆ ಬಂದಿಲ್ಲ ಮಾನ್ಯ ಸದಸ್ಯರ ಹತ್ತಿರ ಯಾವುದೇ ಮಾಹಿತಿ ಇದ್ದರೆ, ಅವರು ಲಿಖಿತ ಮೂಲಕ ನಿರ್ದಿಷ್ಟವಾದ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತ ಆ ಬಗ್ಗೆ ವಿಚಾರಣೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ :—ಡೈರೆಕ್ಟರ್ ಆಫೀಸಿನಿಂದ ಹೋಗಿರುವ ಆರ್ಡರ್‌ಗಳಿಗೆ ಬೆಲೆ ಕೊಟ್ಟಿಲ್ಲ. The Government officials do not care for the orders of the Government. When that is the position why should there be a Government ?

ಅಧ್ಯಕ್ಷರು :—ಕಾಲಿಂಗ್ ಅಟೆನ್‌ಷನ್ ನೋಟೀಸ್ ಮೇಲೆ ಹೆಚ್ಚು ಮಾತನಾಡಲು ಸ್ಕೋಪ್ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ:— ನನ್ನದೊಂದು ಸವಿನಯ ಕ್ರಿಯಾಲೋಪ. ' ಗಮನಸೆಳೆಯುವ ಸೂಚನೆ ಬಂದರೆ ಚರ್ಚೆಮಾಡಬಾರದು ಎಂದು ತಾವು ಹೇಳುತ್ತೀರಿ. ಗಡಿಸಂಬಂಧದ ನಿಯೋಗದಲ್ಲಿ ಡೆಲ್ಲಿಗೆ ಹೋಗಿದಾಗ ಪಾರ್ಲಿಮೆಂಟಿನಲ್ಲಿ ನಮ್ಮ ಕೆಲವರು ಸ್ನೇಹಿತರು ಗಮನಸೆಳೆಯುವ ಸೂಚನೆ ಬಂದಾಗ ಒಂದು ಒಂದೂವರೆ ಗಂಟೆ ಚರ್ಚೆ ಆಗಿರುವುದನ್ನು ನೋಡಿಕೊಂಡು ಬಂದಿದ್ದಾರೆ. ಆದ್ದರಿಂದ ಈಗ ದಯವಿಟ್ಟು ತಾವು ಈಗ ಕೊಟ್ಟಿಂಥ ರೂಲಿಂಗನ್ನು ತಿದ್ದುಪಡಿಮಾಡಿ ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

MR. SPEAKER:—I think Sri Nanjaegowda has raised an interesting point. Whatever happens in the Lok Sabha should not be taken as a model. I think there are rulings on this point geven be great Speakers. Generally, discussion will not be allowed on calling attention notics. Clarifications can be sought be the Member concerned. No other members will generally be allowed to seek clasifications Therefore, there is no need for any amendment of the ruling in this regard.

SUPPLEMENT ESTIMATES AND DEMANDS FOR GRANTS FOR 1970-71 (FIRST INSTALMENT).

SRI RAMAKRISHNA HEGDE:— (Minister for Finance):—

no the recommendation of the Governor, I beg to move :—

" That a further sum not exceeding Rs 14,85,000 be granted to the Government to defray the charges which will come in course of payment during the financial year for the period ending 31st Day of March 1971 in respect of Parliament, State Unionerritory Legislature,.

ಶ್ರೀ ಎಚ್. ಎನ್. ನಂಜೇಗೌಡ — ನನ್ನ ದೊಂದುಕ್ರಿಯಾಲೋಪ ಸ್ವಾಮಿ, ಸಪ್ಲಿಮೆಂಟರಿ ಬೇಡಿಕೆಗಳನ್ನು ಯಾವುದಾದರೂ ನ್ಯೂ ಸರ್ವಿಸ್ ಅಥವಾ ಅನ್‌ಫೋರ್‌ಸೀನ್ ಆಗಿ ಬರತಕ್ಕುದಕ್ಕೆ ಮಾತ್ರ ನೀಮಿತಗೊಳಿಸಬೇಕು. ಇದಕ್ಕೆಲ್ಲ ರುವ ಬೇಡಿಕೆಗಳಲ್ಲಿ ಕೆಲವನ್ನು ಹೋದ ಬಜೆಟ್ಟಿನಲ್ಲಿ ಸೇರಿಸಬಹುದಾಗಿತ್ತು ಮತ್ತು ಕೆಲವನ್ನು ಬಳುವ ಮಾರ್ಚಿ ತಿಂಗಳವರೆಗೂ ತಡೆಯ ಬಹುದಾಗಿತ್ತು. ಹಾಗೆ ಮಾಡಿದ್ದರೆ ಆಕಾಶ ಕಳಚಿ ಬೀಳುತ್ತಿರಲಿಲ್ಲ ಆದರೂ ಕೂಡ ಸಪ್ಲಿಮೆಂಟರಿ ಬೇಡಿಕೆಗಳನ್ನು ಸಭೆಯ ಮುಂದೆ ತಂದು ರೂಲ್ ೧೭೧ ಮತ್ತು ಆರ್ಟಿಕಲ್ ೨೧೫ ಏನಿದೆ ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಇದನ್ನು ಚರ್ಚೆ ಮಾಡಿ ಮಂಜೂರಾತಿಯನ್ನು ನೀಡಿದರೆ ಸರ್ಕಾರದವರು ಹಣ ದುರುಪಯೋಗಪಡಿಸಿಕೊಳ್ಳುವುದನ್ನು ನಾವೂ ಒಪ್ಪಿಕೊಂಡಂತಾಗುತ್ತದೆ. ಅದನ್ನು ತಪ್ಪಿಸಿ ರೂಲ್ ೧೭೧ ಮತ್ತು ಆರ್ಟಿಕಲ್ ೨೧೫ ಕ್ಕೆ ಮರ್ಯಾದೆ ಕೊಡಬೇಕು ಎಂದು ಹೇಳುತ್ತೇನೆ.

MR. SPEAKER:— The hon. Member has raised a point of order. It is not a point of order but it is an opposition to the demands moved. Hon. Member himself has admitted that there is no particular breach committed from the constitutional angle. I do not also find any material to support his argument. I therefore hold there is no substance in the point of order raised by the hon. Member. I shall put the matter before the House.

MR. SPEAKER Motion moved:—

'That a further sum not exceeding Rs. 14,85,000 be granted to the Government to defray the charges which will come in course of payment during the financial year for the period ending 31st day of March 1971, in respect of Parliament, State/ Union Territory Legislature.

The other demand Nos. 17, 21, 23, 26, 26, 30, 33, 38, 44, 48, 53 and 54 are also before the House.